ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಈ ಕಾಲೇಜು ಸ್ಯಾಂಕ್ಷನ್ ಆಗಿದ್ದು ಮೊನ್ನೆ. ೧೯೮೯-೯೦ನೇ ಸಾಲಿಗೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭ ಆಗಿದೆ. ಅಲ್ಲಿ ಸರ್ಕಾರದ ಜಾಗ ಇಲ್ಲ. ಅಕ್ವೈರ್ ಮಾಡಬೇಕು ಎಂಬ ವಿಚಾರ ಇರುವುದರಿಂದ ಸ್ವಲ್ಪ ಅಕ್ವಿಸಿಷನ್ ಎಲ್ಲ ಆಗಬೇಕಾದರೆ ತಡ ಆಗುತ್ತೆದೆ.

ತುಮಕೂರಿನಲ್ಲಿ ಮೀನು ಮಾರುಕಟ್ಟೆ

೩೪೯. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಿಸುವ ಪ್ರಸ್ತಾಪವಿದೆಯೇ ;

ಆ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರುಗಳು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ಹೌದು. ತುಮಕೂರಿನ ನಗರಸಭಾ ಪರಿಷತ್ ವತಿಯಿಂದ ಅಲ್ಲಿನ ಸಂತೆ ಮೈದಾನದಲ್ಲಿ ಮೀನು ಮಾರುಕಟ್ಟೆ ಕಟ್ಟುವ ಪ್ರಸ್ತಾಪವಿರುತ್ತದೆ.

ಆ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಮೀನುಗಾರಿಕೆ ಇಲಾಖೆ ವತಿಯಿಂದ ಸಾಲ ಮತ್ತು ಸಹಾಯಧನ ಯೋಜನೆಯಲ್ಲಿ ಒಟ್ಟು ರೂ. ೪೯,೮೦೦-೦೦ ಗಳನ್ನು ಮಂಜೂರು ಮಾಡಿ ಅದರಲ್ಲಿ ಮೊದಲನೇ ಕಂತು ರೂ. ೧೨,೪೫೦-೦೦ಗಳನ್ನು ಬಿಡುಗಡೆ ಮಾಡಲಾಗಿದೆ. ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ

ಶ್ರೀ ಎಸ್. ಷಫಿ ಅಹಮ್ಮದ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೪೯,೮೦೦-೦೦ ರೂಪಾಯಿಗಳನ್ನು ಈ ಮಾರ್ಕೆಟ್‌ಗೋಸ್ಕರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈ ಹಣವನ್ನು ಯಾವಾಗ ಕೊಟ್ಟಿದ್ದೀರಿ, ಯಾವರೀತಿ ಡಿಲೇ ಆಗಿದೆ, ಮತ್ತೆ ಸೈಟ್ ಸೆಲಾ ಅಲಾಟ್ ಮಾಡಿದ್ದೀರಾ ಎಂದು ಹೇಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಉಪಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಉತ್ತರ ಹೇಳಬೇಕೆಂದರೆ ೧೯೮೫-೮೬ನೇ ಸಾಲಿನಲ್ಲಿ ಅಲ್ಲಿ ಇಂತಹ ಒಂದು ಮೀನು ಮಾರುಕಟ್ಟೆಯ ವ್ಯವಸ್ಥೆಗಾಗಿ ನಮ್ಮ ಮೀನುಗಾರಿಕಾ ಇಲಾಖೆ ಅಲ್ಲಿನ ಪುರಸಭೆಯವರಿಗೆ ಲೀಸ್ ಕಂ ಸಬ್ಸಿಡಿ ಆಧಾರದ ಮೇಲೆ ಸುಮಾರು ೪೮ ಸಾವಿರ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿ ಈಗಾಗಲೇ ೧೨,೪೫೦-೦೦ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಆದರೆ ಯಾವ ಸ್ಥಳದಲ್ಲಿ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಹೊರಟಾಗ, ಅಲ್ಲಿ ಸಾರ್ವಜನಿಕರಿಂದ ತೀವ್ರ ಪ್ರತಿಭಟನೆ ಬಂದಿದ್ದರಿಂದ ಆ ಕೆಲಸ ಸ್ಥಗಿತಗೊಂಡಿದೆ, ನಂತರ ಅದು ಮುಂದುವರಿದಿಲ್ಲ. ಬಹುಶಃ ಇದು ಸರಿಯಾದುದಲ್ಲ ಎಂದು ನನಗೂ ಕೂಡ ಮನವರಿಕೆಯಾಗಿದೆ. ಮಾನ್ಯ ಸದಸ್ಯರೊಡನೆ ನಾನು ಸಮಾಲೋಚನೆ ಮಾಡಿ ಆ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಏನು ಇದೆಯೋ ಅದನ್ನು ಸಾರ್ವಜನಿಕರ ಇಚ್ಛೆಗೆ ತಕ್ಕಂತೆ ಸರಿಯಾದ ಸ್ಥಳದಲ್ಲಿ ಕಟ್ಟಿ ಆ ಮೀನು ಮಾರುಕಟ್ಟೆಯಿಂದ ಜನಗಳಿಗೆ ಸುಲಭವಾಗಿ ಮೀನು ಸಿಕ್ಕುವ ರೀತಿಯಲ್ಲಿ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್

೩೫೦. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್‌ನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜಗಳ ಮಹಾ ಮಂಡಳಿಗೆ ವಹಿಸಿಕೊಡಲಾಗಿದೆಯೇ ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ;

(ಇ) ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗ ಸಂಖ್ಯೆ ಎಷ್ಟು : ಹಾಗೂ ಅವರ ಬದಲಿ ವ್ಯವಸ್ಥೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು)—

(ಅ) ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್‌ನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಂಡಳಿಗೆ ವಹಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

(ಆ) ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್ ಬಹಳ ಕಾಲದಿಂದ ವರ್ಷ ವರ್ಷ ನಷ್ಟವನ್ನು ಅನುಭವಿಸುತ್ತಿರುವುದರಿಂದ ಇದನ್ನು ಕರ್ನಾಟಕ ಎಣ್ಣೆ ಬೀಜಗಳ ವಂಹಾ ಮಂಡಲಕ್ಕೆ ವಹಿಸಿ ಕೊಡಲು ಯೋಜಿಸಲಾಗಿದೆ.

(ಇ) ಈ ಸಂಸ್ಥೆಯಲ್ಲಿ ಒಟ್ಟು ೬೪ ಸಿಬ್ಬಂದಿ ವರ್ಗದವರು ಕೆಲಸ ಮಾಡುತ್ತಿರುತ್ತಾರೆ. ಯಾವುದೇ ಪುನರ್ ವಸತಿ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಕಂಡು ಬರುವುದಿಲ್ಲ. ಹಾಗೂ ಈ ಬಗ್ಗೆ ಈ ಹಂತದಲ್ಲಿ ಯಾವ ಆಲೋಚನೆಯು ಇರುವುದಿಲ್ಲ. ಈ ಸಂಸ್ಥೆ ಆಸ್ತಿಯನ್ನು ತೆಗೆದುಕೊಳ್ಳುವ ಒಂದು ಅಂಶದ ಪ್ರಕಾರ, ಕರ್ನಾಟಕ ಸಹಕಾರ ಎಣ್ಣೆ ಬೀಜ ವಂಹಾ ಮಂಡಳಿ ಈ ಸಿಬ್ಬಂದಿಯಲ್ಲಿ ಅರ್ಹತೆ ಮತ್ತು ಸಾಮರ್ಥ್ಯತೆಯನ್ನು ನೋಡಿ ಅವಶ್ಯಕತೆಗೆ ತಕ್ಕಂತೆ ಹೊಸದಾಗಿ ನೇಮಕ ಮಾಡುವುದು, ಇತರೇ ಸಿಬ್ಬಂದಿಯವರ ಬಗ್ಗೆ ತದನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ನನ್ನ ಹೆಸರನ್ನು 'ರಾಮಲಿಂಗ ಶೆಟ್ಟಿ' ಎಂದು ಬದಲಾಯಿಸಿದ್ದಾರೆ.

ಅಧ್ಯಕ್ಷರು.—ಪ್ರಿಂಟಿಂಗ್ ಪ್ರೆಸ್‌ನವರ ಪರವಾಗಿ ನಾನು ಕ್ಷಮೆ ಕೇಳುತ್ತೇನೆ. ನನ್ನ ಕೆಲಸ ಬರೀ ಕ್ಷಮೆ ಕೇಳುವುದೇ ಆಗಿದೆ. ಇದು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಿಸ್ಟೇಕ್‌ಆಗಿದೆ,

ಶ್ರೀ ವಾಟಾಳ್ ನಾಗರಾಜ್.—ಎಷ್ಟು ಜನರ ಪರವಾಗಿ ತಾವು ಕ್ಷಮೆ ಕೇಳುವುದು. ಈಗ ಒಂದೇ ಸಮನೆ ಕ್ಷಮೆ ಕೇಳುವುದಾಗಿದೆ.

ಅಧ್ಯಕ್ಷರು.—ಇದು ಪ್ರಿಂಟಿಂಗ್ ಪ್ರೆಸ್‌ನವರು ಮಾಡಿದ ಮಿಸ್ಟೇಕ್.

ಶ್ರೀ ರಾಮಲಿಂಗ ರೆಡ್ಡಿ.—ನನ್ನ ಪ್ರಶ್ನೆಗೆ ಉತ್ತರ ಮಂತ್ರಿಗಳು ಕೊಟ್ಟಿಲ್ಲ, ಅಂಡರ್ ಸೆಕ್ರೆಟರಿಯಿಂದ ಕೊಡಿಸಿಬಿಟ್ಟಿದ್ದಾರೆ.

ಅಧ್ಯಕ್ಷರು.—ಪ್ರಶ್ನೆಯನ್ನು ಕೇಳಿ,

ಶ್ರೀ ರಾಮಲಿಂಗ ರೆಡ್ಡಿ,—ಮಾನ್ಯ ಅಧ್ಯಕ್ಷರೆ, ನಾನು ಪಿಚ್ಚಿನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರವನ್ನು ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಒಂದು ನಿಮಿಷ, ನಿಮ್ಮ ಹೆಸರು ರಾಮಲಿಂಗರೆಡ್ಡಿಯೆಂದು ಪ್ರಿಂಟಾಗಿದೆ.

ಶ್ರೀ ರಾಮಲಿಂಗರೆಡ್ಡಿ.—ಆನ್ಸರ್ ಕೊಟ್ಟಿದ್ದಾರಲ್ಲ, ಅದರಲ್ಲಿ ರಾಮಲಿಂಗಶೆಟ್ಟಿ ಎಂದು ಇದೆ,

ಅಧ್ಯಕ್ಷರು.—ಅದು ಡಿಪಾರ್ಟ್‌ಮೆಂಟ್‌ನವರು ಮಾಡುವುದು.

ಶ್ರೀ ರಾಮಲಿಂಗರೆಡ್ಡಿ.—ಸನ್ಮಾನ್ಯ ಸಭಾಧ್ಯಕ್ಷರೆ, ಈ ಒಂದು ಕರ್ನಾಟಕ ಆಗ್ರೊ ಪ್ರೊಟೀನ್ಸ್ ಲಿಮಿಟೆಡ್‌ನ್ನು ಸ್ಥಾಪನೆ ಮಾಡಿದ ಉದ್ದೇಶವೇನು, ಇವಕ್ಕೆ ಯಾರಾರು ಬಂಡವಾಳ ಹೂಡಿದರು ಮತ್ತು ಇದು ನಷ್ಟವಾಗುವುದಕ್ಕೆ ಕಾರಣವೇನು ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಇದನ್ನು ಸ್ಥಾಪನೆ ಮಾಡಿರತಕ್ಕವರು ಯಾರೆಂದರೆ, ಕೆಎಸ್‌ಐಟಿಸಿ ನೆರವನ್ನು ನಾವು ಪಡೆದು ಕೆಎಐಟಿಸಿ ಏನಿದೆ ಅದು ಮತ್ತು ಲೋಕಲ್ ಫಾರ್ಮರ್ಸ್ ರಿಪ್ರೆಸೆಂಟೇಟಿವ್ ಇವರಿಯಲ್ಲಿ ಇದನ್ನು ಪ್ರಾರಂಭ ಮಾಡಿದರು. ಇದರ ಉದ್ದೇಶವೇನೆಂದರೆ ಇಂಟಿಗ್ರೇಟೆಡ್ ಏರಿಯಾದಲ್ಲಿ ಅಂದರೆ ಆಯಿಲ್ ಅಂಡ್ ಪ್ರೊಟೀನ್ಸ್ ಕಾಂಪ್ಲೆಕ್ಸ್ ಆಟ್ ರಾಯಚೂರು, ಇಲ್ಲಿ ಇದು ಬರಬೇಕು ಎಂಬ ಉದ್ದೇಶದಿಂದ ಇದನ್ನು ಸ್ಥಾಪನೆ ಮಾಡಿದ್ದುದು.

ಶ್ರೀ ರಾಮಲಿಂಗರೆಡ್ಡಿ.—ನಷ್ಟಕ್ಕೆ ಕಾರಣವೇನು ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ನಷ್ಟಕ್ಕೆ ಕಾರಣವೇನು ಎಂದು ಮೂಲ ಪ್ರಶ್ನೆಯಲ್ಲಿ ಕೇಳದೇ ಇರುವುದರಿಂದ ಅದರ ವಿವರಗಳು ನನ್ನ ಹತ್ತಿರ ಇಲ್ಲ. ತಾವು ಮೂರನೇ

ಪ್ರಶ್ನೆಯಲ್ಲಿ ಸಿಬ್ಬಂದಿವರ್ಗದ ಬಗ್ಗೆ ಕೇಳಿದ್ದರಿಂದ ಹೆಚ್ಚಾಗಿ ನಾವು ಅದರ ವಿವರಗಳ ಬಗ್ಗೆ ಹೋಗಿದ್ದೇವೆ. ದಯವಿಟ್ಟು ತಾವು ಇನ್ನೊಂದು ಸಾರಿ ನಷ್ಟದ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ವಿವರಗಳನ್ನು ತರಿಸಿ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಅಧ್ಯಕ್ಷರೆ. ಈ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್ ಏನಿದೆ ಇದನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜಗಳ ಬೆಳೆಗಾರರ ಮಹಾ ಮಂಡಲಿಗೆ ವಹಿಸಿಕೊಡಲು ಯೋಜಿಸಲಾಗಿದೆ ಎಂದು ಹೇಳಿದ್ದೀರಿ. ಈ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ ಆಸ್ತಿ ಏನಿದೆ ಅದನ್ನು ಮಾತ್ರ ನಿಗಮ ತೆಗೆದುಕೊಳ್ಳುತ್ತದೆ, ಟಳಿ ಕೆಲಸಗಾರರನ್ನು ತೆಗೆದುಕೊಳ್ಳುವುದಿಲ್ಲ ಎಂದು ಸರ್ಕಾರದ ಆಜ್ಞೆ ಇದೆ. ಈ ಟಳಿ ಕೆಲಸಗಾರರು ಆರು ತಿಂಗಳಿಂದ ಸಂಬಳವಿಲ್ಲದೆ ಬೀದಿ ಪಾಲಾಗಿದ್ದಾರೆ. ಈ ಟಳಿ ಕೆಲಸಗಾರರನ್ನು ಎಣ್ಣೆ ಬೀಜದ ನಿಗಮಕ್ಕೆ ಸೇರಿಸುತ್ತೀರೊ ಅಥವಾ ಅವರನ್ನು ಬೀದಿ ಪಾಲು ಮಾಡುತ್ತೀರೋ ಎಂದು ನಾನು ಕೇಳುತ್ತೇನೆ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಷ್ಟವಾಗುವುದಕ್ಕೆ ಹಲವಾರು ಕಾರಣಗಳು ಇವೆ. ಆದರೂ ಸಹ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ್ನು ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಲಿಗೆ ವಹಿಸುವ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ಮಾಡಿಲ್ಲ. ಅದನ್ನು ವಹಿಸಿಕೊಡತಕ್ಕ ವಿಚಾರ ಸರ್ಕಾರದ ಮುಂದೆ ಇದೆ. ವಹಿಸಿಕೊಡತಕ್ಕ ಒಂದು ತೀರ್ಮಾನಕ್ಕೆ ಬಂದಾಗ ಹಾಲಿ ಇರತಕ್ಕ ಟಳಿ ಜನ ಕೆಲಸಗಾರರ ಹಿತವನ್ನು ಕೂಡ ಸರ್ಕಾರ ನೋಡುತ್ತದೆ. ಸಹಜವಾಗಿ ಅರ್ಜೆಂಟಾಗಿ ಬೇಕಾದವರನ್ನು ತೆಗೆದುಕೊಳ್ಳಬೇಕಾಗುತ್ತದೆ. ಟೆಂಪೊರರಿಯಾಗಿ ಇದ್ದವರನ್ನು ಬಿಡತಕ್ಕ ಸಂದರ್ಭ ಬಂದರೂ ಬರಬಹುದು. ತಾವು ೬ ತಿಂಗಳಿಂದ ಸಂಬಳ ಸಿಕ್ಕಿಲ್ಲವೆಂದು ಹೇಳಿದ್ದೀರಿ. ಯಾರು ಕೆಲಸ ಮಾಡಿದ್ದಾರೆ, ಅವರಿಗೆ ಸಂಬಳ ಕೊಡಿಸತಕ್ಕ ಬಗ್ಗೆ ನಾವು ವ್ಯವಸ್ಥೆ ಮಾಡುತ್ತೇವೆ. ಮತ್ತೆ ಅವರಿಗೆ ಮುಂದೆ ಕೆಲಸ ಕೊಡತಕ್ಕ ವಿಚಾರದ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೦೭ (೩೬೬)ನ್ನು.

ಶ್ರೀ ಡಿ. ಬಿ. ಚಂದ್ರೇಗೌಡರ ಪರವಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಕೇಳುತ್ತಾರೆ.

ತೀರ್ಥಹಳ್ಳಿ ನಗರದ ಕುಡಿಯುವ ನೀರಿನ ಯೋಜನೆ ಬಗ್ಗೆ

೩೬೬. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ನಗರದ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಎಂದು ?

ಇ) ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ಸದರಿ ಯೋಜನೆಗೆ ಈ ವರ್ಷ ತೆಗೆದಿಟ್ಟ ಹಣವೆಷ್ಟು ?

ಈ) ಈ ಯೋಜನೆಯು ಕಾರ್ಯಪ್ರಾರಂಭವಾಗದಿದ್ದರ ಅದಕ್ಕೆ ಕಾರಣಗಳೇನು ?

ಉ) ಯೋಜನೆಯ ಕಾರ್ಯ ಎಂದಿನಿಂದ ಪ್ರಾರಂಭ ಮಾಡಲಾಗುವುದು ಮತ್ತು ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಟಿ, ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ನೀಡಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ. ವಸ ೫೩ ಯುಡಬ್ಲ್ಯುಎಸ್ ೮೯, ದಿನಾಂಕ ೨೨-೧-೧೯೯೦.

ಇ) ಈ ಯೋಜನೆಯ ಅಂದಾಜು ವೆಚ್ಚ ರೂ. ೩೧.೦೦ ಲಕ್ಷವಾಗಿದ್ದು ಈ ಯೋಜನೆಯನ್ನು ೧೯೯೦-೯೧ರಲ್ಲಿ ಮಂಡಲಿಯ ಆಯವ್ಯಯ ಪಟ್ಟಿಯಲ್ಲಿ ರೂ. ೫೦,೦೦೦ವನ್ನು ಒದಗಿಸಲಾಗಿದೆ.

ಈ) ೧೯೮೯-೯೦ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ಹಣವನ್ನು ಒದಗಿಸದೇ ಇದ್ದ ಕಾರಣ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ.